Amount Spent on Rozgar Scheme in Belgaum District.

802. SRI K. C. MODGEKAR DESAI (Bagewadi),—Will the Minister for Rural Development Panchayat Raj, Information and Publicity be pleased to state,—

a) The amount spent upto 31st March 1990 under Rozgar Scheme in Belgaum District in general and Bagewadi Uchagaon Constituency in particular.

b) The Mandal where lowest amount has been spent.

c) The Mandal where highest amount has been spent.

SRI M. Y. GHORPADE (Minister for Rural Developement and Panchayat Raj, Information and Publicity).—

a) In Belgaum District a sum of Rs. 775.495 lakhs and Rs. 69.601 lakhs in Bagewadi Uchagon constituency has been spent.

b) Peeranwadi Mandal (Rs. 1.237 lakhs).

c) Kadoli Mandal (Rs. 3.044 lakhs).

ಬೀದರ್, ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ ವಿಪರೀತ ಮಳೆಯಾಗಿ ಆಗಿರುವ ತೊಂದರೆಯ ಬಗ್ಗೆ ಪ್ರಸ್ತಾಪ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ ಕಳೆದ ಶುಕ್ರವಾರ ಅಧಿವೇಶನ ನಡೆಯುವಾಗ ಸಭಾನಾಯಕರು ಇದ್ದ ಸಮಯದಲ್ಲಿ ಈ ಸಭೆಯ ಸದಸ್ಯರಾಗಿರತಕ್ಕ ಮಾನ್ಯ ಖಿರ್ಗೆಯವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿ ಬೀದರ್, ಗುಲ್ಬರ್ಗಾ ರಾಯಚೂರಿನಲ್ಲಿ ಮಳೆ ವಿಪರೀತ ವಾಗಿದ್ದು ಜನರಿಗೆ ತೊಂದರೆಯಾಗಿದೆಯಾದ್ದರಿಂದ ಮಾನ್ಯ ನೀರಾವರಿ ಸಚಿವರನ್ನು ಅಲ್ಲಿಗೆ ಕಳುಹಿಸಿ ಕೊಡಬೇಕೆಂದು ಹೇಳಿದರು. ಈ ವಿಷಯವನ್ನು ನಾನು ಮತ್ತೆ ಸೋಮವಾರ ಪ್ರಸ್ತಾಪ ಮಾಡಿದೆ. ಮಾನ್ಯ ನೀರಾವರಿ ಸಚಿವರೂ ಆ ಭಾಗಕ್ಕೆ ಹೋಗಿ ಬಂದಿದ್ದಾರೆ. ಅಲ್ಲಿನ ಪರಿಸ್ಥಿತಿ ನೋಡಿಕೊಂಡು ಬಂದಿರುವ ಮಂತ್ರಿಗಳು ಸರ್ಕಾರದ ಪರವಾಗಿ ಇಲ್ಲಿ ಹೇಳಿಕೆ ಕೊಡಬೇಕಾಗುತ್ತದೆ. ಅಲ್ಲಿ ಕೆರೆಗಳು ಒಡೆದು ಳಿ ಕೋಟಿ ರೂಪಾಯಿ ಲುಕ್ಸಾನು ಆಗಿದೆ ಎಂದು ಪತ್ರಿಕೆಗಳಲ್ಲಿ ವರದಿ ಬಂದಿದೆ. ನಮಗೆ ಬಂದಿರತಕ್ಕ ವರದಿ ಪ್ರಕಾರ ಅಲ್ಲಿ ಇನ್ನೂ ಹೆಚ್ಚಿನ ಹಾನಿ ಆಗಿದೆ. ಈ ಬಗ್ಗೆ ಸರ್ಕಾರ ಏನು ಕಾರ್ಯ ಕ್ರಮ ಕೈಗೊಂಡಿದ ಏನ್ನುವ ಬಗ್ಗೆ ನಾನು ಸರ್ಕಾರದಿಂದ ತಿಳಿಯಬಯಸುತ್ತೇನೆ.

ಅಧ್ಯಕ್ಷರು.—ಈ ವಿಷಯವಾಗಿಯೇ ನಾನು ಒಂದು ಗಮನ ಸೆಳೆಯುವ ಸೂಚನೆಗೆ ಅನುಮತಿ ಕೊಟ್ಟಿದ್ದು ಅದು ನಾಳೆ ಚರ್ಚೆಗೆ ಬರುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಗಮನ ಸೆಳೆಯುವ ಸೂಚನೆ ಎಂದರೆ ಅದರಲ್ಲಿ ಸಹಿ ಮಾಡಿರುವ ಒಂದಿಬ್ಬರು ಸದಸ್ಯರು ಮಾತ್ರ ಅದರ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಇರುತ್ತದೆ. ನಾವೂ ಅದರಲ್ಲಿ ಭಾಗವಹಿಸುವುದಕ್ಕಾಗುವುದಿಲ್ಲ. ಮಾನ್ಯ ಮಂತ್ರಿಗಳು ಬಂದಮೇಲೆ ಹೇಳಿಕೆ ಕೊಡುತ್ತಾರೆಂದು ನಮಗೆ ತಿಳಿಸಲಾಗಿತ್ತು. ಇವತ್ತು ಮಂತ್ರಿಗಳು ಅಲ್ಲಿಗೆ ಹೋಗಿ ಬಂದು ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ ? ಹಾಗೂ ಅಲ್ಲಿಗೆ ಎಷ್ಟು ಲುಕ್ಸಾನು ಆಗಿದೆ ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ಹೇಳಿಕೆ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಮತ್ತು ಈ ಬಗ್ಗೆ ನಾವೂ ಕೂಡಾ ವಿಶೇಷವಾಗಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಇದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ತಾವು ಇದನ್ನು ಪರಿಶೀಲನೆ ಮಾಡಿ. ಆದರೆ ಮಾನ್ಯ ನೀರಾವರಿ ಮಂತ್ರಿಗಳು ಇಲ್ಲಿಯೇ ಇದ್ದಾರೆ. ಅವರು ಏನಾದರೂ ಹೇಳಲಿ. ಮಾನ್ಯ ಮಂತ್ರಿಗಳು ಅಲ್ಲಿಗೆ ಹೋಗಿ ಬಂದು ಮೂರು ದಿವಸಗಳಾದವು. ಮಂತ್ರಿಗಳು ಏನಾದರೂ ತಿಳಿಸುತ್ತಾರೆ ಎಂದು ಜನರು ಕಾಯುತ್ತಿದ್ದಾರೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಈ ಬಗ್ಗೆ ನಾನು ನಾಳೆ ಸ್ಟೇಟ್‌ಮೆಂಟ್ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಅಲ್ಲಿ ಮಳೆಯಿಂದ ಜನ ಸತ್ತಿದ್ದಾರೆ. ಮಂತ್ರಿಗಳು ಅಲ್ಲಿಗೆ ಹೋಗಿ ಬಂದಿದ್ದಾರೆ, ಅವರು ಇಂತಹ ಪ್ರಮುಖ ವಿಷಯದ ಬಗ್ಗೆ ಹೇಳಿಕೆಯನ್ನು ಕೊಡ ಬೇಕಾಗುತ್ತದೆ. ಇವತ್ತು ಅಲ್ಲಿ ಏನು ನಡೆದಿದೆ, ಅಲ್ಲಿ ಪ್ರಾಣಾಪಾಯ ಆಗಿದೆಯೇ ಎಂದು ತಿಳಿಯಲು ಎಲ್ಲರೂ ಆತುರದಿಂದ ಇದ್ದಾರೆ.

ಅಧ್ಯಕ್ಷರು —ಅವರು ನಾಳೆ ಹೇಳುತ್ತಾರೆ.

ಶ್ರೀ ಡಿ. ಎ. ಚಿನ್ನಪ್ಪ.—ಅಧ್ಯಕ್ಷರೇ, ನನ್ನದೊಂದು ಪ್ರಶ್ನೆ ಪ್ರಶ್ನೋತ್ತರ ಪಟ್ಟಿಯಲ್ಲಿ ಕೊನೆಯಲ್ಲಿ ಇದ್ದು ಅದನ್ನು ತಾವು ಕರೆಯಲಿಲ್ಲ, ಇದು ಟೀ ತೋಟಕ್ಕೆ ಸಂಬಂಧಪಟ್ಟಿದ್ದು ಬಹಳ ಮಹತ್ವದ ಪ್ರಶ್ನೆಯಾಗಿದೆ.

ಅಧ್ಯಕ್ಷರು.—ಈ ಬಗ್ಗೆ ನಾನು ನೋಡುತ್ತೇನೆ. ಈಗ ಬೈರೇಗೌಡರ ಗಮನ ಸೆಳೆವ ಸೂಚನೆ.

ಶ್ರೀ ಸಿ. ಬೈರೇಗೌಡ.—ನಾನು ಈ ಬಗ್ಗೆ ಸರ್ಕಾರದ ಗಮನ ಸೆಳೆಯುವುದಕ್ಕೆ ಮೊದಲು ಒಂದು ವಿಷಯದ ಬಗ್ಗೆ ನಾನು ತಮ್ಮ ಗಮನಸೆಳೆಯಬಯಸುತ್ತೇನೆ. ಮೊನ್ನೆ ವಾನ್ಯ ಲಕ್ಕಪ್ಪನವರಂ ಟೆಲಿಫೋನ್ ಟ್ಯಾಪಿಂಗ್ ವಿಷಯವಾಗಿ ಒಂದು ಸೂಚನೆ ತಂದಾಗ ಆ ಬಗ್ಗೆ ತಾವು ತಮ್ಮ ತೀರ್ಪನ್ನು ಕೊಡುತ್ತೇವೆಂದು ಹೇಳಿದ್ದೀರಿ.

ಅಧ್ಯಕ್ಷರು.—ಆ ಬಗ್ಗೆ ನಾಳೆ ಕೊಡುತ್ತಿದ್ದೇನೆ.

ಗಮನ ಸೆಳೆಯುವ ಸೂಚನೆಗಳು

(i) ರಾಜ್ಯ ಸರ್ಕಾರದವರು ಸಾಕಷ್ಟು ಪ್ರಮಾಣದಲ್ಲಿ ರೇಷ್ಮೆ ಗೂಡುಗಳನ್ನು ಒದಗಿಸುವಲ್ಲಿ ವಿಫಲವಾಗಿರುವುದು.

ಶ್ರೀ ಸಿ. ಬೈರೇಗೌಡ.— ರಾಜ್ಯದಲ್ಲಿ ಸರ್ಕಾರದವರು ಸಾಕಷ್ಟು ಪ್ರಮಾಣದ ರೇಷ್ಮೆ ಗೂಡುಗಳನ್ನು ಒದಗಿಸಲು ವಿಫಲವಾಗಿರುವುದರಿಂದ ಕೋಟ್ಯಾಂತರ ರೂಪಾಯಿಗಳಷ್ಟು ನಷ್ಟ ಹಾಗೂ ತೊಂದರೆಯಾದ ಬಗ್ಗೆ ವಾನ್ಯ ರೇಷ್ಮೆ ವ್ಯವಸಾಯದ ರಾಜ್ಯ ಮಂತ್ರಿಗಳ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ (ವಾನ್ಯ ರೇಷ್ಮೆ ಖಾತೆ ರಾಜ್ಯ ಸಚಿವರು).—ವಾನ್ಯ ಅಧ್ಯಕ್ಷರೇ, ಈ ಬಗ್ಗೆ ನಾನು ಈ ಕೆಳಕಂಡ ಹೇಳಿಕೆ ಮಾಡಬಯಸುತ್ತೇನೆ.

ರಾಜ್ಯದ ರೇಷ್ಮೆ ಬೆಳೆಗಾರರ ವಾರ್ಷಿಕ ರೇಷ್ಮೆ ಮೊಟ್ಟೆಗಳ ಬೇಡಿಕೆ ಸುಮಾರು ೨೩ ಕೋಟಿ. ಈ ರೇಷ್ಮೆ ಮೊಟ್ಟೆಗಳ ತಯಾರಿಕೆಗೆ ಸುಮಾರು ೯೨ ಕೋಟಿ ಮೈಸೂರು ತಳಿ ಬಿತ್ತನೆ ಗೂಡುಗಳ ಅವಶ್ಯಕತೆ ಇದ್ದು ರಾಜ್ಯದಲ್ಲಿ ವಾರ್ಷಿಕ ೧೯ಳಿ ಕೋಟಿ ಮೈಸೂರು ಬಿತ್ತನೆ ಗೂಡುಗಳ ಉತ್ಪಾದನೆ ಯಾಗುತ್ತಿದೆ. ಸುಮಾರು೨೩.೩ಳಿ ಕೋಟಿ ರೇಷ್ಮೆ ಮೊಟ್ಟೆಗಳು ರಾಜ್ಯದಲ್ಲಿ ಉತ್ಪಾದನೆಯಾಗುತ್ತಿವೆ. ಇದರಲ್ಲಿ ರಾಜ್ಯ ಸರ್ಕಾರದ ಬಿತ್ತನೆ ಕೇಂದ್ರಗಳಲ್ಲಿ ೯.೪೭ ಕೋಟಿ ಮೊಟ್ಟೆಗಳನ್ನೂ ಉಳಿದ ೧೩.೯೭ ಕೋಟಿ ರೇಷ್ಮೆ ಮೊಟ್ಟೆಗಳನ್ನು ಖಾಸಗಿ ರೇಷ್ಮೆ ಮೊಟ್ಟೆ ತಯಾರಕರು ಉತ್ಪಾದಿಸುತ್ತಿದ್ದಾರೆ.

ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಮಿಶ್ರತಳಿ ರೇಷ್ಮೆ ಹುಳುಗಳನ್ನು ಸಾಕುವ ವಲಯಗಳಲ್ಲಿ ಮುಂಚಿತವಾಗಿ ಮಳೆ ಬಿದ್ದರೆ ಮಿಶ್ರತಳಿ ರೇಷ್ಮೆ ಮೊಟ್ಟೆಗಳಿಗೆ ಆಕಸ್ಮಾತ್ತಾದ ಬೇಡಿಕೆ ಉಂಟಾಗುತ್ತದೆ. ಮೈಸೂರು ತಳಿ ಬೆಳೆಯುವ ಪ್ರದೇಶದಲ್ಲೂ ಮುಂಚಿತವಾಗಿ ಮಳೆ ಬಿದ್ದಿದ್ದಲ್ಲಿ ಬೇಡಿಕೆಯನ್ನು ಪೂರೈಸುವಷ್ಟು ಮೈಸೂರು ಬಿತ್ತನೆ ಗೂಡುಗಳ ಉತ್ಪಾದನೆಯಾಗುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ಮೈಸೂರು ತಳಿ ಬಿತ್ತನೆ ಗೂಡುಗಳನ್ನು ಮಳೆ ಆಸರೆಯ ತೋಟಗಳಲ್ಲಿಯೆ ಬೆಳೆಯಲಾಗುತ್ತಿದೆ. ಈ ಅನಿಶ್ಚಿತ ವಾತಾವರಣವನ್ನು ಸರಿಪಡಿಸಲು ರೈತರು ವೈಯಕ್ತಿಕ ಉತ್ತಮ ನೀರಾವರಿ ಸೌಲಭ್ಯಗಳನ್ನು ತ್ವರಿತ ಗತಿಯಲ್ಲಿ ಒದಗಿಸಿಕೊಳ್ಳುವುದು ಅಗತ್ಯವೆನಿಸಿದೆ. ಆದರೆ ಮೈಸೂರು ತಳಿ ಬೆಳೆಯುವ ಪ್ರದೇಶದಲ್ಲಿ ಮುಂಚಿತವಾಗಿ ಮಳೆ ಬೀಳದೆ ಇದ್ದಲ್ಲಿ ಮೈಸೂರು ತಳಿ ಗೂಡುಗಳ ಉತ್ಪಾದನೆ ಕಡಿಮೆಯಾಗಿ ಗೂಡುಗಳ ಕೊರತೆ ಉಂಟಾಗುತ್ತದೆ. ಇದರಿಂದ ಮಿಶ್ರತಳಿ ಮೊಟ್ಟೆಗಳ ಉತ್ಪಾದನೆ ಕಡಿಮೆ ಸಹಾಗುತ್ತದೆ. ಈ ಕಾರಣದಿಂದ ಮಿಶ್ರತಳಿ ವಲಯದ ರೇಷ್ಮೆ ಮೊಟ್ಟೆಗಳ ಬೇಡಿಕೆಯನ್ನು ತ್ವರಿತ ಪೂರೈಸಲು ಸಾಧ್ಯವಾಗುವುದಿಲ್ಲ.